# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂ: 128/2019

**ಫಿರ್ಯಾದುದಾರರು:** **ಕರ್ನಾಟಕ ರಾಜ್ಯದ ಪರವಾಗಿ (ಚಿಂತಾಮಣಿ ನಗರ ಪೋಲೀಸರು)**

**ವಿರುದ್ಧ**

**ಆರೋಪಿತರು:** **ಲೋಕೇಶ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರು:** | ನರಸಿಂಹಮೂರ್ತಿ | ಫ್ರಾಸಾ: | 08 |
| **ತಂದೆಯ ಹೆಸರು:** | ಮುನಿಶ್ಯಾಮಪ್ಪ | ಚಾಸಾ: | 10 |
| **ವಯಸ್ಸು:** | 41 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 06.04.2024 |
| **ಉದ್ಯೋಗ:** | ಬಿ.ಎಂ.ಟಿ.ಸಿ. ಚಾಲಕ | | |
| **ವಾಸ ಸ್ಥಳ:** | ಮುರಗಮಲ್ಲ ಗ್ರಾಮ, ಚಿಂತಾಮಣಿ ತಾಲ್ಲೂಕು. | | |

### ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:

ಮೃತ ಕವಿತಾ ನನಗೆ ಗೊತ್ತು, ಆಕೆ ನನ್ನ ನಾದಿನಿ. ಗಂಗಾಧರ ವರಸೆಯಲ್ಲಿ ನನ್ನ ತಮ್ಮ. ಅವರಿಗೆ 3 ಜನ ಹೆಣ್ಣು ಮಕ್ಕಳು. ಅವರು ಚಿಂತಾಮಣಿಯ ಶ್ರೀರಾಮನಗರದಲ್ಲಿ ವಾಸವಿದ್ದರು. ಮೃತ ಕವಿತಾ ದಿನಾಂಕ:26.01.2019 ರಂದು ನಿಧನ ಹೊಂದಿದ್ದರು. ಆಕೆಯು ಕೋಲಾರ ಆರ್.ಎಲ್.ಜಾಲಪ್ಪ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದರು. 2 ನೇ ಆರೋಪಿಯು 1 ನೇ ಆರೋಪಿಯ ಜೊತೆ ಅಕ್ರಮ ಸಂಬಂಧ ಹೊಂದಿದ್ದರಿಂದ, 1 ನೇ

ಆರೋಪಿ ಲೋಕೇಶ್ ನ ಹೆಂಡತಿ ಶ್ರೀಗೌರಿಯನ್ನು ಸಾಯಿಸುವ ಉದ್ದೇಶದಿಂದ 2 ನೇ ಆರೋಪಿಯು ಗಂಗಮ್ಮ ದೇವಸ್ಥಾನದಲ್ಲಿ ವಿಷಮಿಶ್ರಿತ ರವೆಪಾಯಸವನ್ನು ನಾರಾಯಣಮ್ಮನಿಗೆ ಮತ್ತು ಕವಿತಾಳ ಮೈದುನ ರಾಜುವಿಗೆ ಸಹ ನೀಡಿದ್ದು, ಸದರಿ ಪ್ರಸಾದವನ್ನು ರಾಜು ಕವಿತಾಳ ಮನೆಗೆ ತಂದು ನೀಡಿದ್ದು, ಮನೆಯಲ್ಲಿದ್ದವರೆಲ್ಲಾ ಸೇವಿಸಿದ್ದು, ನಂತರ ಎಲ್ಲರೂ ವಾಂತಿಬೇಧಿ ಬಂದಿದ್ದರಿಂದ ಅಸ್ವಸ್ಥಗೊಂಡಿದ್ದರಿಂದ ಎಲ್ಲರನ್ನು ಚಿಂತಾಮಣಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಕೋಲಾರದ ಆರ್.ಎಲ್.ಜಾಲಪ್ಪರವರು ದಾಖಲಾಗಿದ್ದು, ಮೊದಲು ಕವಿತರವರು ತನ್ನ ಮಕ್ಕಳಿಗೆ ಚಿಕಿತ್ಸೆ ಕೊಡಿಸಿ, ನಂತರ ಆಕೆ ಚಿಕಿತ್ಸೆ ಪಡೆದುಕೊಳ್ಳಲು ತಡವಾಗಿದ್ದರಿಂದ ಆಕೆ ತೀವ್ರವಾಗಿ ಅಸ್ವಸ್ಥಗೊಂಡು ಚಿಕಿತ್ಸೆ ಫಲಕಾರಿಯಾಗದೇ ಆಕೆ ನಿಧನಹೊಂದಿರುತ್ತಾಳೆ. ಶ್ರೀಗೌರಿಯ ಅಜ್ಜಿ ಸರಸ್ವತಮ್ಮಳ ಸಹ ನಿಧನ ಹೊಂದಿದ್ದಳು. ಉಳಿದವರು ಚಿಕಿತ್ಸೆಯಿಂದ ಚೇತರಿಸಿಕೊಂಡರು. ಮೃತ ಕವಿತಾಳ ಶವವನ್ನು ಕೋಲಾರದ ಆರ್.ಎಲ್. ಜಾಲಪ್ಪ ಆಸ್ಪತ್ರೆಯ ಶವಾಗಾರದಲ್ಲಿ ನೋಡಿರುತ್ತೇನೆ. ಆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಪೋಲಿಸರು ಮತ್ತು ಊರಿನ ಜನರು ಘಟನೆಯ ಬಗ್ಗೆ ಮತ್ತು ಆರೋಪಿತರ ಬಗ್ಗೆ ತಿಳಿಸಿದ್ದರಿಂದ ನಾವು ಅವರನ್ನು ನೋಡುವ ಸಲುವಾಗ ಚಿಂತಾಮಣಿಯ ಟ್ಯಾಂಕ್ ಬಂಡ್ ರಸ್ತೆಯಲ್ಲಿ 2 ನೇ ಆರೋಪಿಯನ್ನು ನೋಡಿರುತ್ತೇನೆ, ತದನಂತರ ಆಕೆ ಕಾಣಿಸಲಿಲ್ಲ.

**<u>ಪಾಟೀ ಸವಾಲುಃ 2 ಮತ್ತು 4 ನೇ ಆರೋಪಿತರ ಪರ ಶ್ರೀ.ಎಸ್.ಆರ್.ಬಿ. ವಕೀಲರಿಂದಃ</u>**

2) 1 ನೇ ಆರೋಪಿಯ ಮತ್ತು 2 ನೇ ಆರೋಪಿಗೆ ಅಕ್ರಮ ಸಂಬಂಧ ಇದ್ದ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಹೆಂಡತಿಯನ್ನು ಸಾಯಿಸುವ ಉದ್ದೇಶದಿಂದ 2 ನೇ ಆರೋಪಿಯು ಪ್ರಸಾದದಲ್ಲಿ ವಿಷ ಬೆರೆಸಿದ್ದಳು ಎನ್ನುವ ವಿಷಯವನ್ನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಶ್ರೀಗೌರಿಯ ಅಜ್ಜಿ ಸರಸ್ವತಮ್ಮಳು ವಿಷಮಿಶ್ರಿತ ಪಾಯಸವನ್ನು ಸೇವಿಸಿ ನಿಧನ ಹೊಂದಿದ್ದಳು ಎಂದು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯನ್ನು ಚಿಂತಾಮಣಿಯ ಟ್ಯಾಂಕ್ ಬಂಡ್ ರಸ್ತೆಯಲ್ಲಿ ನೋಡಿದ್ದೇನೆಂದು ಪೋಲಿಸರಿಗೆ ಕೊಟ್ಟ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಾನು 2 ನೇ ಆರೋಪಿಯನ್ನು ನೋಡಿಲ್ಲ ಎಂದರೆ ಸರಿಯಲ್ಲ.

3) ನಾನು ಪೋಲಿಸರಿಗೆ ಕೊಟ್ಟ ಹೇಳಿಕೆಯಲ್ಲಿ ಯಾರೋ ಹೆಂಗಸು ಗಂಗಮ್ಮ ದೇವಸ್ಥಾನದ ಹತ್ತಿರ ವಿಷಮಿಶ್ರಿತ ಪಾಯಸವನ್ನು ನೀಡಿದ್ದರು ಎಂದು ಹೇಳಿದ್ದೇನೆಂದರೆ ಸಾಕ್ಷಿಯು ಲಕ್ಷ್ಮೀ ಎನ್ನುವವರ ಹೆಸರನ್ನು ತಿಳಿಸಿರುತ್ತೇನೆಂದು ಹೇಳುತ್ತಾರೆ. ನಾನು ಪೋಲಿಸರಿಗೆ ದಿನಾಂಕಃ26.01.2019 ರಂದು ಹೇಳಿಕೆ ನೀಡಿದ್ದೇನೆಂದರೆ ಸರಿ. ಸದರಿ ಹೇಳಿಕೆಯನ್ನು ಕೋಲಾರ ಜಾಲಪ್ಪ ಆಸ್ಪತ್ರೆಯಲ್ಲಿ ನೀಡಿದ್ದೇನೆಂದರೆ ಸರಿ. ನಮಗೆ ಘಟನೆ ಬಗ್ಗೆ ದಿನಾಂಕಃ26.01.2019 ರಂದು ತಿಳಿಯಿತು ಎಂದರೆ ಸರಿ. ನಾನು

ದಿನಾಂಕಃ26.01.2019 ರಂದು ಬೆಳಿಗ್ಗೆ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ಹೋಗಿದ್ದೆನು. ಶವವನ್ನು 3.45 ಗಂಟೆಯ ಸಮಯಕ್ಕೆ ತೆಗೆದುಕೊಂಡು ಬರಲಾಯಿತು. ನಾನು ಘಟನೆಯನ್ನು ಸೃಷ್ಟಿಸಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ.ವಿ.ಆರ್. ವಕೀಲರು ಮೇಲೆ 2 ಮತ್ತು 4 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ06.04.2024 **(ನಾಗವೇಣಿ)**
ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.